## ದಿನಾಂಕ 05.12.2020 ರಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್ ಸಂಖ್ಯೆ-180 ರ ವಾರ್ಡ್ ಸಮಿತಿಯ ಸಭೆಯ ನಡವಳಿಗಳು :-

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು.

1) ಶ್ರೀ ಸತೀಶ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ

2) ಶ್ರೀ ಅಖಿಲ ಹೆಚ್.ಎಂ, ವಾರ್ಡ್ ಸಮಿತಿ ಸಂಚಾಲಕರು ಮತ್ತು ಕಿರಿಯ ಅಭಿಯಂತರರು ಬನಶಂಕರಿ ದೇವಸ್ಥಾನ ವಾರ್ಡ್ ಸಂಖ್ಯೆ-180

3) ಶ್ರೀ ದ್ಯಾನೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ ಉಪ ವಿಭಾಗ

4) ಶ್ರೀ ರಾಜಶೇಖರ್, ಸಹಾಯಕ ಅಭಿಯಂತರರು, ಬೆಸ್ಕಾಂ ಉಪ ವಿಭಾಗ

5) ಶ್ರೀ ಸೈಯದ್ ಮುಜೀಬುರ್ ರೆಹಮಾನ್, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ

6) ರಾಜೇಶ್ವರಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ

7) ಶ್ರೀ ಮಧುಕರ, ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ

8) ಕಾವ್ಯ, ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ

9) ಶ್ರೀ ನವೀನ್, ಉಪ ವಲಯ ಅರಣ್ಯಾಧಿಕಾರಿಗಳು, ಬಿ.ಬಿ.ಎಂ.ಪಿ

10) ಶ್ರೀ ಚಿಕ್ಕಣ್ಣ ಎ.ಎಸ್.ಐ ಬನಶಂಕರಿ ಟ್ರಾಫಿಕ್ ಪೊಲೀಸ್ ಠಾಣೆ

11) ಶ್ರೀ ಅಣ್ಣಾಜಿ ಎ.ಎಸ್.ಐ ಕುಮಾರಸ್ವಾಮಿ ಲೇಔಟ್ ಟ್ರಾಫಿಕ್ ಪೊಲೀಸ್ ಠಾಣೆ

12) ಶ್ರೀ ಚಿಕ್ಕಣ್ಣ ಪ್ರಗತಿಪುರದ ನಿವಾಸಿ ಹಾಗೂ ವಾರ್ಡ್ ಸಮಿತಿ ಸದಸ್ಯರು

13) ಶ್ರೀ ಮೆಹಬೂಬ್ ಫಯಾಜ್, ವಿವೇಕಾನಂದ ಕಾಲೋನಿ ನಿವಾಸಿ ಹಾಗೂ ವಾರ್ಡ್ ಸಮಿತಿ ಸದಸ್ಯರು.

14) ಶ್ರೀ ಪ್ರಭು, ಸರಬಂಡೆಪಾಳ್ಯ ನಿವಾಸಿ ಹಾಗೂ ವಾರ್ಡ್ ಸಮಿತಿ ಸದಸ್ಯರು

ವಾರ್ಡ್ ಸಮಿತಿ ಸಂಚಾಲಕರು ಮತ್ತು ಕಿರಿಯ ಅಭಿಯಂತರರು ಬನಶಂಕರಿ ದೇವಸ್ಥಾನ ವಾರ್ಡ್ ಸಂಖ್ಯೆ-180 ರವರಾದ ಶ್ರೀ ಅಖಿಲ ಹೆಚ್.ಎಂ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.**

ವಾರ್ಡ್‌ನ ನೋಡಲ್ ಅಧಿಕಾರಿಯವರು ಮೇಲಿನ ಅಧಿಕಾರಿಗಳ ಪರಿಚಯಿಸಲಾಯಿತು ಹಾಗೂ ನೋಡಲ್ ಅಧಿಕಾರಿಗಳ ಜೊತೆಯಲ್ಲಿ ಕ್ಷಿಪ್ರ ಸಭೆಯನ್ನು ಆಯೋಜಿಸಲಾಗಿದ್ದು, ಪ್ರಮುಖವಾಗಿ ಕೋವಿಡ್-19 ರ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಮೊದಲನೇ ಆದ್ಯತೆಯನ್ನು ಕೋವಿಡ್-19 ಗೆ ಒತ್ತು ನೀಡುವಂತೆ ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

Scanned with CamScanner

1) ಮಾನ್ಯ ಆಯುಕ್ತರ ಸೂಚನೆ ಮೇರೆಗೆ ವಾರ್ಡ್‌ನಲ್ಲಿ ಹೊಸದಾಗಿ ಅವಶ್ಯವಿರುವ ಸಾರ್ವಜನಿಕ ಶೌಚಾಲಯ ಹಾಗೂ ಫುಟ್‌ಪಾತ್ ಕಾಮಗಾರಿಗಳ ಸ್ಥಳಗಳನ್ನು ಗುರುತಿಸಿ ಮುಂದಿನ ಸಭೆಗೆ ತಿಳಿಸಲು ವಾರ್ಡ್ ಸಮಿತಿ ಸಂಚಾಲಕರಿಗೆ ಹಾಗೂ ವಾರ್ಡ್ ಸದಸ್ಯರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

2) ಸಭೆಯಲ್ಲಿ ಹಾಜರಿದ್ದ, ಕಂದಾಯ ಇಲಾಖೆಯ ಅಧಿಕಾರಿಗಳು ನೋಡೆಲ್ ಅಧಿಕಾರಿಗಳಿಗೆ ಡಿಮ್ಯಾಂಡ್, ವಸೂಲಾತಿ ಮತ್ತು ಬಾಕಿ ಕಂದಾಯ ವಸೂಲಾತಿ ಬಗ್ಗೆ ನೋಡಲ್ ಅಧಿಕಾರಿಗಳಿಗೆ ಮಾಹಿತಿಯನ್ನು ಈ ಕೆಳಕಂಡಂತೆ ನೀಡಿದರು.

| ಡಿಮ್ಯಾಂಡ್ | ವಸೂಲಾತಿ | ಬಾಕಿ |
|---|---|---|
| 1.83 ಕೋಟಿ | 0.76 ಕೋಟಿ | 1.07 ಕೋಟಿ |

3) ದಿನಾಂಕ : 22.11.2020 ರಂದು ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಾಮೂಹಿಕ ಸ್ವಚ್ಚತಾ ಕಾರ್ಯಕ್ರಮದಿಂದ ಇಂದಿರಾ ಕ್ಯಾಂಟೀನ್ ಹಿಂಭಾಗ ಶೇಖರಿಸಿರುವ ಡೆಬ್ರಿಸ್‌ನ್ನು ತೆರವುಗೊಳಸಲು ವಾರ್ಡ್ ಸದಸ್ಯರುಗಳು ವಾರ್ಡ್ ಅಭಿಯಂತರರಿಗೆ ತಿಳಿಸಿದರು, ವಾರ್ಡ್ ಅಭಿಯಂತರರು ಮಾತನಾಡಿ ಈಗಾಗಲೇ ಡೆಬ್ರಿಸ್‌ನ್ನು ತೆರವುಗೊಳಸುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು.

4) ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ನಲ್ಲಿ ಹಸಿಕಸ ಸಂಗ್ರಹಣೆ ಕೆಲಸವು ಸರಿಯಾದ ರೀತಿಯಲ್ಲಿ ಆಗುತ್ತಿಲ್ಲವೆಂದು ಹಾಜರಿದ್ದ ಸ.ಕಾ.ನಿ.ಅ(ಘನತ್ಯಾಜ್ಯ)ರವರಿಗೆ ತಿಳಿಸಿದರು, ಸ.ಕಾ.ನಿ.ಅ(ಘನತ್ಯಾಜ್ಯ)ರವರು ಮಾತನಾಡಿ ಹಸಿಕಸ ಸಂಗ್ರಹಣೆ ಕೆಲಸವನ್ನು ನಿರ್ವಹಿಸಲಾಗುತ್ತಿದ್ದು ಹೆಚ್ಚಿನ ಹಸಿಕಸ ಸಂಗ್ರಹಣೆ ಮಾಡಲಾಗುವುದೆಂದು ತಿಳಿಸಿದರು.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಗೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ಅವರನ್ನು ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು
ಹಾಗೂ ಕಿರಿಯ ಅಭಿಯಂತರರು

05/12/2020

ವಾರ್ಡ್ 180 ರ ನೋಡಲ್ ಅಧಿಕಾರಿ
ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು,
ಬಸವನಗುಡಿ ಉಪವಿಭಾಗ

Scanned with CamScanner